ಬೆಂಗಳೂರಿನಿಂದ ಊರಿಗೆ ಬಂದಾಗೆಲ್ಲ ನಮ್ಮಿಬ್ಬರ ಮಧ್ಯೆ ಈ ಕೆಲಸ ನಡೆಯುತ್ತಿತ್ತು. ಅಂತೂ ಇಬ್ಬರೂ ಕಣ್ಣು ಸನ್ನೆಗಳಲ್ಲೇ ಮಾತನಾಡಿಕೊಳ್ಳಲು ಪ್ರಾರಂಭಿಸಿದ್ದೆವು. ಅನಂತರ ಯಾರೂ ಇಲ್ಲದ ಸಮಯದಲ್ಲಿ ಎದುರಿಗೆ ಸಿಕ್ಕಿದಾಗಲೆಲ್ಲ ಒಂದೆರಡು ಮಾತುಗಳು ವಿನಿಮಯವಾಗುತ್ತಿದ್ದವು. ಒಂದು ದಿನ ಮುಸುಮುಸು ಕತ್ತಲಲ್ಲಿ ನನ್ನ ಕೈಗೆ ಸಿಕ್ಕಿಯೇ ಬಿಟ್ಟಳು. ನನ್ನ ಇಡೀ ದೇಹ ಗಡಗಡ ನಡುಗಲು ಪ್ರಾರಂಭವಾಗಿಬಿಟ್ಟಿತು. ಅವಳದೂ ಅದೇ ಗತಿಯಾಗಿತ್ತು. ಲಂಗಾ ದಾವಣಿಯಲ್ಲಿದ್ದ ಅವಳನ್ನು ಮೃದುವಾಗಿ ಅಪ್ಪಿಕೊಂಡೆ. ನನ್ನ ಕೈಗಳು ಅವಳ ಬೆನ್ನ ಮೇಲಿದ್ದು, ಅವಳ ಕೆನ್ನೆಯ ಮೇಲೆ ತುಟಿಗಳನ್ನು ಒತ್ತಿದೆ. ಕೆನ್ನೆಗಳು ಅಷ್ಟೊಂದು ಮೃದು ಎನ್ನುವುದು ಗೊತ್ತಾಗಿದ್ದು ಅದೇ ಮೊದಲು. ಕತ್ತಲು ಏನೇನೊ ಹೊಸ ಹೊಸ ಅನುಭವಗಳನ್ನು ನೀಡುತ್ತಿತ್ತು. ಅದು ನನ್ನ ಬದುಕಿನ ಮೊದಲ ಅಪ್ಪುಗೆ, ತುಟಿಗೆ ತುಟಿ ಒತ್ತಿದ ಮೊದಲ ಅನುಭವ. ಅನಂತರ ನಾನು ಅವಳು ಎಷ್ಟೋ ದಿನಗಳು ಹುಲುಸಾಗಿ ಬೆಳೆದ ರಾಗಿ, ಜೋಳದ ಹೊಲಗಳ ಕತ್ತಲಲ್ಲಿ, ಗೋಡೆಗಳ ಮರೆಯಲ್ಲಿ ನಿಂತುಕೊಂಡು ಕುಳಿತುಕೊಂಡು ಒಬ್ಬರನ್ನೊಬ್ಬರು ತಬ್ಬಿಕೊಂಡು ಸಮಯ ಕಳೆದಿದ್ದೆವು. ಗಿಡಗಳಲ್ಲಿ ಸಣ್ಣಸಣ್ಣ ಹಕ್ಕಿಗಳು ಹುಲ್ಲಿನ ಎಸಳುಗಳಲ್ಲಿ ಕಟ್ಟಿದ ಗೂಡುಗಳಲ್ಲಿ ಇಟ್ಟಿದ್ದ ಮೊಟ್ಟೆಗಳನ್ನು ಅವುಗಳ ಮರಿಗಳನ್ನು ನೋಡಿ ಪುಳಕಗೊಂಡಿದ್ದೆವು. ಲಂಗ ದಾವಣಿಯಲ್ಲಿ ತಿಂಡಿಗಳನ್ನು ಬಚ್ಚಿಟ್ಟುಕೊಂಡು ಬಂದು ಕೊಡುತ್ತಿದ್ದಳು. ಎಲ್ಲವೂ ಈಗ ಬರೀ ನೆನಪುಗಳು ಮಾತ್ರ.

ಹೆಣ್ಣು ಅದ್ಭುತ ಸೃಷ್ಟಿ. ಹಾಗೆಯೇ `ಹೆಣ್ಣು. ಹೊನ್ನು. ಮಣ್ಣು.' ಎನ್ನುವ ಮಾತಿದೆ. ಅದರಲ್ಲೂ ಹೆಣ್ಣೇ ಎಲ್ಲವೂ ಮತ್ತು ಎಲ್ಲದಕ್ಕೂ ಕಾರಣ. ಹೆಣ್ಣು ಸೃಷ್ಟಿಯ ಒಂದು ಅದ್ಭುತ ಚಮತ್ಕಾರ. ಹೆಣ್ಣಿನ ವ್ಯಾಮೋಹ ಯಾವ ದೇವನನ್ನು, ಋಷಿ ಮುನಿಗಳನ್ನೂ ಬಿಟ್ಟಿಲ್ಲ. ಪ್ರೇಯಸಿ, ಪತ್ನಿ, ತಾಯಿ ಎಲ್ಲವೂ ಹೆಣ್ಣೇ. ವಿಶ್ವದ ಅಸ್ತಿತ್ವ, ಮೂಲಭೂತ ಪ್ರೇರಕ ಶಕ್ತಿಯೂ ಹೆಣ್ಣೇ. ಲಕ್ಷ್ಮೀದೇವಿಯ ಕಣ್ಣುಗಳು ನನ್ನ ಹೃದಯದಲ್ಲಿ ಇಂದಿಗೂ ಹಾಗೆ ತಾಜಾ ಬಾಣಗಳಾಗಿ ನಾಟಿಕೊಂಡು ಕುಳಿತಿವೆ. ಮೊದಲ ಪ್ರೇಮ, ಮೊದಲ ಮುತ್ತು, ಮೊದಲ ಅಪ್ಪುಗೆ ಈಗಲೂ ಅವಳನ್ನು ತಬ್ಬಿಕೊಂಡಂತೆ ಹಾಗೇ ಉಳಿದುಕೊಂಡಿದೆ. ಮನಸ್ಸು ಎಷ್ಟು ಅದ್ಭುತವಾದುದು? ಐದಾರು ದಶಕಗಳಾದರು ಅದು ಹೇಗೆ ಈ ಮನಸ್ಸೆಂಬ ಮನಸ್ಸು ಅಷ್ಟು ನಿಖರವಾಗಿ ಅಷ್ಟು ಸ್ವಚ್ಛವಾಗಿ ತನ್ನ ಜ್ಞಾಪಕ ಶಕ್ತಿಯನ್ನು ಮುಪ್ಪಾಗದೆ ಉಳಿಸಿಕೊಂಡಿದೆ? ದೇಹಕ್ಕೆ ವಯಸ್ಸಾದರೆ ಏನಂತೆ ಮನಸ್ಸಿಗೆ ವಯಸ್ಸಾಗುತ್ತದೆಯೇ? ಇದೆಲ್ಲವೂ ಸತ್ತ ಮೇಲೂ ಕಾಡುತ್ತಿರುವುದು ನನಗೆ ಆಶ್ಚರ್ಯವಾಗುತ್ತಿದೆ. ಅವಳು ಈಗ ಎಲ್ಲಿದ್ದಾಳೊ ಏನೋ ಗೊತ್ತಿಲ್ಲ. ಸಾಧ್ಯವಾದರೆ ಹೋಗಿ ಅವಳನ್ನು ಭೇಟಿ ಮಾಡಬೇಕೆನಿಸುತ್ತಿದೆ.

ನಾನು ಬಿ.ಎಸ್ಸಿ ಆನರ್ಸ್ ಮುಗಿಸಿದ ಮೇಲೆ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ಮಾಸ್ಟರ್ ಡಿಗ್ರಿಗೆ ಸೇರಿಕೊಂಡೆ. ಬೆಂಗಳೂರಿನ ಹೃದಯ ಭಾಗ ಮೆಜೆಸ್ಟಿಕ್‌ನಲ್ಲಿ ಬ್ರಿಟಿಷರ ಕಾಲದಲ್ಲಿ ಕಟ್ಟಿದ್ದ ಯುರೋಪ್ ಶೈಲಿಯ ಸೆಂಟ್ರಲ್ ಕಾಲೇಜು ಕಟ್ಟಡಗಳು ಗಾಢ ಕೆಂಪು ಬಣ್ಣ ಬಳಿದುಕೊಂಡು ಗಂಭೀರವಾಗಿ ತೋರುತ್ತಿದ್ದವು. ತರಗತಿಗಳು ನಡೆಯುವ ಕೊಠಡಿಗಳು ಸಿನಿಮಾ ಹಾಲ್‌ನಂತೆ ವಿಶಾಲವಾಗಿದ್ದು ಉದ್ದುದ್ದವಾಗಿ ಫಿಕ್ಸ್ ಮಾಡಿದ ಕುರ್ಚಿಗಳು ಸ್ಟೆಪ್ ಬೈ ಸ್ಟೆಪ್ ರೀತಿಯಲ್ಲಿದ್ದವು. ಕೆಲವು ವಿದ್ಯಾರ್ಥಿಗಳು ಪಾಠ ಮಾಡುವ ಪ್ರೊಫೆಸರ್ ಮುಂದೆ ಕುಳಿತಿದ್ದರೆ ಹಿಂದಿನ ಕುರ್ಚಿಗಳಲ್ಲಿ ಕುಳಿತಿದ್ದವರು ನಾಟಕದ ಹಾಲ್‌ನಲ್ಲಿ ಹಿಂದೆ ಮಹಡಿಯಲ್ಲಿ ಕುಳಿತಿರುವಂತೆ ತೋರುತ್ತಿದ್ದರು. ನನಗಂತೂ ನನ್ನ ಬದುಕು ಸಾರ್ಥಕವಾದಂತೆ ತೋರುತ್ತಿತ್ತು. ಒಳ್ಳೆ ವಿಜ್ಞಾನಿಯಾಗಿ ದೇಶಕ್ಕೆ ಏನಾದರು ಮಾಡಬೇಕು. ನನ್ನ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಅನಿಸುತ್ತಿತ್ತು.

***

ನಾನು ಬಿ.ಎಸ್ಸಿ ಆನರ್ಸ್ ಡಿಗ್ರಿ ಮುಗಿಸಿ ಊರಿಗೆ ಬಂದಾಗಲೇ ಲಕ್ಷ್ಮೀದೇವಿಯ ಮದುವೆ ನಿಶ್ಚಯವಾಗಿರುವುದಾಗಿ ತಿಳಿದುಬಂದಿತು. ಒಂದು ಸಾಯಂಕಾಲ ನಾನೂ ಲಕ್ಷ್ಮೀದೇವಿ ಹುಲುಸಾಗಿ ಬೆಳೆದಿದ್ದ ಜೋಳದ ಹೊಲದ ಮಧ್ಯೆ ಕುಳಿತುಕೊಂಡಿದ್ದೆವು. ಹೊಳೆಯುವ ಬಣ್ಣ, ಮುಖದಲ್ಲಿ ಮಂದಸ್ಮಿತ ಸುಂದರವಾದ ಕಣ್ಣುಗಳು. ಬಹಳ ನಾಜೂಕಾದ ಕೈಗಳು. ಅದೇ ಕೊಲ್ಲುವ ನೋಟ. ನಗುವಾಗ ಸುಂದರವಾಗಿ ದಾಳಿಂಬೆ ಬೀಜಗಳಂತೆ ತೋರುವ ದಂತಪಂಕ್ತಿ.



ಈಶ್ವರ

## ವಾಸ್ತವ

ಓಡಿ
ತಪ್ಪಿಸಿಕೊಳ್ಳಬಹುದು
ಹಾವು ಬರುವಾಗ,
ಆದರೆ
ತಪ್ಪಿಸಿಕೊಳ್ಳಲಾಗದು
ಸಾವು ಬರುವಾಗ!

★ ಭಾಸ್ಕರ ಕೆ. ಕುಂಟಪದವು

ಲಕ್ಷ್ಮೀದೇವಿ ಹತ್ತಿರದಲ್ಲಿ ಕುಳಿತಿದ್ದರೂ ಮನದಲ್ಲಿ ಅವಳನ್ನು ಮುಟ್ಟಲೊ ಬೇಡವೊ ಎನ್ನುವ ಆತಂಕ ತುಂಬಿಕೊಂಡಿತ್ತು. ಬಹುಶಃ ನನಗೆ ಮದುವೆಯಾಗುತ್ತಿದೆ ಮುಟ್ಟಬೇಡಿ ಎಂದು ಬಿಟ್ಟರೆ? ಕೊನೆಗೆ ಧೈರ್ಯ ಮಾಡಿ ಅವಳ ಕೈಗಳನ್ನು ನನ್ನ ಎರಡೂ ಕೈಗಳಿಂದ ಹಿಡಿದು ಕೊಂಡೆ. ಯಾವ ರೀತಿಯ ಪ್ರತಿಕ್ರಿಯೆಯೂ ತೋರದ ಕಾರಣ ನನ್ನ ಮನಸ್ಸು ಸ್ವಲ್ಪ ನಿರಾಳವಾಯಿತು. ಇನ್ನೇನು ಕತ್ತಲಾಗುವ ಸಮಯ ಪಕ್ಕದಲ್ಲಿಯೇ ಕುಳಿತಿದ್ದಳು. ಹೃದಯ ಢವಢವ ಎಂದು ಹೊಡೆದುಕೊಳ್ಳುತ್ತಿದ್ದು ದಿಢೀರನೆ ಅವಳ ಕೆನ್ನೆಗೆ ಒಂದು ಮುತ್ತು ಕೊಟ್ಟುಬಿಟ್ಟೆ. ನನ್ನ ಕಡೆಗೆ ತಿರುಗಿ ನೋಡಿದ ಲಕ್ಷ್ಮೀದೇವಿ ನಕ್ಕಳು. ಈಗ ಅವಳ ತುಟಿಗಳ ಮೇಲೆ ನನ್ನ ತುಟಿಗಳನ್ನು ಒತ್ತಿದೆ. ಅನಂತರ ಸುಮಾರು ಹೊತ್ತು ಹಾಗೇ ನಮ್ಮ ಆಟ ಮುಂದುವರಿದಿತ್ತು. ಹೆಣ್ಣು ಮತ್ತು ಗಂಡು ನಡುವಿನ ಆಕರ್ಷಣೆಗೆ ಏನೋ ಒಂದು ಅದ್ಭುತವಾದ ಮಾಂತ್ರಿಕ ಶಕ್ತಿ ಇದೆ. ಅದನ್ನು ವಿವರಿಸುವುದು ಯಾರಿಂದಲೂ ಸಾಧ್ಯವಾಗದ ಕಥೆ, ಕಾವ್ಯವಾಗಿದೆ.

ಸೂರ್ಯನ ಕಿರಣಗಳು ಜೋಳದ ಪೈರುಗಳ ನಡುವೆ ನನ್ನನ್ನು ಆಗಾಗ ಇಣಿಕಿ ನೋಡುತ್ತಿದ್ದವು. ಈಗ ಸುಮುಸುಮು ಕತ್ತಲಾಗಿತ್ತು. ಲಕ್ಷ್ಮೀದೇವಿ ಇದ್ದಕ್ಕಿದ್ದ ಹಾಗೆ ನನ್ನನ್ನು ಹತ್ತಿರಕ್ಕೆ ಬರಸೆಳೆದು ಅಪ್ಪಿಕೊಂಡು ಕೆನ್ನೆಯನ್ನು ಜೋರಾಗಿ ಕಚ್ಚಿಬಿಟ್ಟಳು. ಎಷ್ಟು ಜೋರಾಗಿ ಕಚ್ಚಿದಳೆಂದರೆ ನಾನು ನೋವಿಗೆ ಜೋರಾಗಿ ಕಿರುಚಿಬಿಡುವಷ್ಟು. ರಕ್ತ ಬಂದುಬಿಟ್ಟಿತೇನೊ ಎಂದು ಕನ್ನೆಯನ್ನು ಬೆರಳುಗಳಿಂದ ಸವರಿಕೊಂಡು ನೋಡಿದೆ. ರಕ್ತ ಬಂದಿರಲಿಲ್ಲ. ಆದರೆ ಹಲ್ಲುಗಳಿಂದ ಗಾಯವಾದಂತೆ ಬೆರಳ ತುದಿಗಳಿಗೆ ಗೊತ್ತಾಯಿತು. ಎದ್ದುನಿಂತ ಲಕ್ಷ್ಮೀದೇವಿ `ನಾವಿಬ್ಬರು ಮತ್ತೆ ಈ ರೀತಿ ಭೇಟಿಯಾಗುವುದಿಲ್ಲ. ಓಹ್! ಕತ್ತಲಾಗಿದೆ. ನನ್ನ ತಾಯಿ ಹುಡುಕ್ತಾ ಇರ್ತಾಳೆ. ನಾನು ಬರ್ತೀನಿ' ಎಂದ ಲಕ್ಷ್ಮೀದೇವಿ ಸುತ್ತಲೂ ನೋಡಿ, `ನೀನು ಇಲ್ಲೇ ಸ್ವಲ್ಪ ಹೊತ್ತು ಕುಳಿತಿರು. ಯಾರಾದರು ನೋಡಿದರೆ ಕಷ್ಟ' ಎಂದಿದ್ದೆ ಜೋಳದ ಕಡ್ಡಿಗಳನ್ನು ಎರಡೂ ಕೈಗಳಿಂದ ಪಕ್ಕಕ್ಕೆ ಸರಿಸುತ್ತ ಸರಸರನೆ ನಡೆದುಬಿಟ್ಟಳು. ನಾನು ಎಷ್ಟೊತ್ತು ಹಾಗೇ ಕುಳಿತುಕೊಂಡಿದ್ದೆನೊ ಏನೊ? ಎದ್ದು ನೋಡಿದಾಗ ಸುತ್ತಲೂ ಗಾಢವಾದ ಕತ್ತಲು ತುಂಬಿಕೊಂಡಿತ್ತು. ಕಣ್ಣುಗಳು ತೇವವಾಗಿ, ಕೆನ್ನೆ ನೋವಾಗುತ್ತಿತ್ತು. ಆ ರಾತ್ರಿಯಲ್ಲ ನನಗೆ ನಿದ್ದೆ ಬರಲೇ ಇಲ್ಲ. ಮರುದಿನ ಬೆಳಿಗ್ಗೆ ತಿಂಡಿ ತಿನ್ನುವಾಗ ನನ್ನ ತಾಯಿ `ಕೃಷ್ಣ ಏನಾಯಿತು? ಕೆನ್ನೆ ಅಷ್ಟು ಊದಿಕೊಂಡಿದೆ?' ಎಂದಿದ್ದೆ ಶಾಕ್ ಹೊಡೆಸಿಕೊಂಡವನಂತೆ `ಏನೂ ಇಲ್ಲವಲ್ಲ' ಎಂದು ಕೆನ್ನೆಯನ್ನು ಒಂದು ಕೈಯಿಂದ ತಡವಿಕೊಂಡೆ. ನನ್ನ ತಾಯಿ ಮತ್ತೆ ಆ ವಿಷಯ ಕೇಳಲಿಲ್ಲ.

***

ಭೌತಶಾಸ್ತ್ರ ವಿಭಾಗ ಸೆಂಟ್ರಲ್ ಕಾಲೇಜಿನಲ್ಲಿ 1882ರಲ್ಲಿ ಪ್ರಾರಂಭವಾದ ಅತ್ಯಂತ ಹಳೆಯ ವಿಭಾಗವಾಗಿತ್ತು. ಎಲ್ಲಾ ಪ್ರೊಫೆಸರುಗಳು